ಮೈ ಕೈ ತಿಕ್ಕಿಕೋತ ತನ್ನ ಮೈಗೆ ಉಜ್ಜಿಕೋತ, ಎದಿಗಿ ಎದಿ ಒಡ್ಡಿಕೋತ ನಾಚಿಕೆ ಸತ್ತವನಾಂಗ ವರ್ತಿಸಿದ್ದ, ಅರವತ್ತರ ವಯದ ಗೆರಿ ಮುಟ್ಟಲಿಕ್ಕಿದ್ದ ಈ ಬಹದ್ದೂರ ಹಿಂಗ, ಗಡವತನದಿಂದ ಮಾತಾಡತಾನಂತ ಆಕಿ ಎಣಿಸಿರಲಿಲ್ಲ. ಅಂವ ಮೂಬೆರಕಿಯಿದ್ದ. ಅವಳು ಉರುಟಣೆ ಹೊಡೆದು ತಂದ ಮಂತ್ರವನ್ನು ಹೇಗೆ ಉರಪಟೆ ಹೊಡಿಸಬೇಕು ಅಂತ ತಿಳಿದವನಿದ್ದ. ಇನ್ನೇನು, ಪೆನ್‌ಶನ್ ಅನ್ನೋ ಗಂಟು ಸಿಗಲಿಕ್ಕಿದೆ, ಆ ಗಂಟನ್ನು ಎದಿಯಾಗ ಇಟಗೊಂಡು, ಮಗ್ಗಲದಾಗ ಯಾವಾಕಿನಾರಾ ಬಾಚಿಕೊಂಡೇನಿ ಅನ್ನೋ ಗಟ್ಟುಳ್ಳವನಿದ್ದ. ಹೊಟ್ಟ್ಯಾಗ ಮಕ್ಕಳಿಲ್ಲದ, ಬಾ ಹೋಗು ಅನ್ನೋ ಅಣ್ತಂಮ್ಮಂದಿರಿಲ್ಲದ ಈ ಮೂದೇವಿನ ಘಟ್ ಅಂತ ಕೊಡವಿಕೊಳ್ಳಾಕ ಸಿದ್ಧನಿದ್ದ. ಅವಳು ಬಾಯಿ ಸತ್ತವಳಾದಳು. ತನ್ನ ಅಕ್ಕನ ಮಗಳು, ಅವನಿಗೂ ಮಗಳೇ ಅಂತಾಕಿ ಕೂಟಾಗ, ಹಾಂಗ ನಡಕೊಂಡಾನ... ಹುಡುಗಿ ಬಂದು 'ಕಾಕಿ ಹಿಂಗ ಹಿಂಗ...' ಅಂತ ಗಂಟಲುಬ್ಬರಿಸಿ ತನ್ನ ತಬ್ಬಿಕೊಂಡು ಹೇಳಿದಾಗ, ಹ್ಯಾಂಗ ಅನ್ನಿಸಿರಬ್ಯಾಡಾ? ಹುಡುಗಿನ್ನ ರಮಿಸಿ, 'ಅವ್ವಗ ಹೇಳಬ್ಯಾಡವ್ವ' ಅಂದ್ರ ಅದು – 'ನಾ ಹೇಳಾಂಗಿಲ್ಲ ಕಾಕಿ, ಆದ್ರ ನಿನ ಕೂಟಾಗ ಇರೂದು ಖುಷಿ, ಇರ್ತಿತ್ತ ನಂಗ. ನಾ ಇಲ್ಲೀಗ ಮತ್ತ ಬರಾಕಿಲ್ಲ, ನೀನ ಬರ್ರಿರು ಕಾಕಿ' ಅಂತ ಅತ್ತಿತು. ಅವತ್ತು ಆಕಿನ ಬಸ್ ಹತ್ತಿಸೂ ಮುಂದಾನೂ ಕಾಕಿ–ಮಗಳು ಸೋರೋ ಕಣ್ಣುಗಳನ್ನ ಒತ್ತಿದ್ದೇ ಒತ್ತಿದ್ದು. ಮನೆಗೆ ಬಂದವಳೇ ಅವನನ್ನ, 'ಯಾಕಲಾ ಭಾಡಕೋ' ಅಂತ ದಬಾಯಿಸಿದಳು. ಅಂವ ಎರಡ ದಿನ ಕುಂಯ್ ಕುಂಯ್ ಅಂದು ಮೂರನೇ ದಿನ, ಹೆಡಿ ಎತ್ತಿದ ಸಿಂಬಳ ಹುಳು ಆಗಿದ್ದಕ್ಕೆ ಅವಳು ಭರಪೂರ ಅತ್ತಳು. 'ಗಂಡ–ಹೆಂಡಿರ' ಫೋಟೋ ಗೋಡೆಯಿಂದ–ಶೋ ಕೇಸಿನಿಂದ ಎತ್ತಿ ಕಪಾಟಿನ ಮೂಲೆಯೊಂದರಲ್ಲಿ ಡಬ್ಬು ಕೆಡವಿದಳು. ಅವನಿಗದೇನೂ ಫರಕು ಬೀಳಲಿಲ್ಲ. ಅಸಲಿಗೆ, ಅಂವ ಗಮನಿಸಿರಲೂ ಇಲ್ಲ. ಎರಡು ದಿನ ಬಿಟ್ಟು ಇವಳೇ ಏನೋ ನೆಪ ತೆಗೆದು ಬಿಕ್ಕಳಿಸಿ ಹೇಳಿದಾಗ ನೋಡಿದ. ಏನೂ ಅನ್ನಲಿಲ್ಲ. ಖರೇವಂದ್ರೂ ಆ ಖಾಲಿತನ ಅವನಿಗೆ ತಾಕಲೂ ಇಲ್ಲ.

'ನನ್ನ ಹೊಟ್ಟ್ಯಾಗಂತೂ ಮಕ್ಕಳ್ನ ಕೊಡಲಿಲ್ಲ. ಆ ಕೂಸಿನ್ನ ನಾಕ ದಿನಾ ಉಳಿಸ್ಕಾಗಬೇಕೆಂದ್ರೂ ಮಣ್ಣ ಹಾಕಿದಿಯಲ್ಲ, ಹೊಟ್ಟಿಗೇನಾರ ತಿಂತೀ?' ಅಂತ ಗೋಳುಹಚ್ಚಿದಳು.

'ಏನ ತಿಂತೀನೋ ಅದನ್ನ ನೀನೂ ತಿನ್ನೂದು' ಅಂದವನೇ ಗಪ್ಪಾದ.

'ಲೋಕದ ಗಂಡೂಸರೆಲ್ಲ ಹಿಂಗ, ನಾ ಅವರಾಗಿನ ಒಂದು ಸಿಗುರು' ಅನ್ನೋ ಮಾತು ಅವಳೆದುರು ಅಪ್ಪ, ಚಿಗಪ್ಪ, ಅಣ್ಣ, ಮಾಸ್ತರು ಎಲ್ಲರನೂ ಗಿರಗಿರ ಸುತ್ತಿಸಿತು. ಇರಲಿಕ್ಕಿಲ್ಲ ಅನ್ನಿಸ್ತು. ಇರಭೋದೇನೋ ಅನ್ನಿಸ್ತು. ಅವ್ವ, ಚಿಗವ್ವ, ಅತ್ತಿಗೆ, ಅತ್ತೆ, ಮಾಸ್ತರ ಹೆಂಡಿರು ಎಲ್ಲರ ಕಣ್ಣಪಸೆಯ ಅಂಟು ತನ್ನ ಕಣ್ಣಿಗೆ ಕಾಡಿಗೆಯಂತೆ ಮೆತ್ತಿಕೊಂಡಿದೆ ಅಂತ ಭಾಸವಾಯ್ತು. ಆವತ್ತು, ಚಿಗವ್ವನ ತಿಥಿಯಂದು ಇಟ್ಟ ಅವಳ ನಗುವಿನ ಫೋಟೋದೊಳಗೆಂಥದೋ ಯಾತನೆಯ ನೂಲು ನೇಯ್ದು ಹೋದಂತೆ ಕಂಡಿದ್ದು ನೆನಪಾಯಿತು. ಆ ನೂಲು ಈಗ ತನ್ನ ಮುಖವನ್ನೂ ನೇಯುತ್ತಿದೆ ಅನ್ನಿಸಿ, ಪರಪರ ಮುಖ ತಿಕ್ಕಿಕೊಂಡಳು. 'ಮುಂದೇನು?' ಅಂತ ಕೇಳಿದ್ದಕ್ಕೆ, ಬಿಂಕದಿಂದಲೇ ಹೇಳಿದ – 'ನೀ ಹೇಳು, ನಿನಗ ಹ್ಯಾಂಗ ಬೇಕೋ ಹಾಂಗ'. ಈಗಲೂ ಅದೇ ಮಾತು. ಸುಮಾರು ಮೂವತ್ತು ವರ್ಷಗಳ ಹಿಂದಿನ, 'ಬೇಕಾರ ಇರು, ಸಾಕಾರ ಹೋಗು' ಅನ್ನೋ ಮಂತ್ರದ ಹೊಸ ಆವೃತ್ತಿ ಕೇಳಿಕೆಯಾದದ್ದು ಖಚಿತವೆನ್ನಿಸಿತ್ತು ಅವಳಿಗೆ.

ಅವಳು ಕೂತಲ್ಲೇ ಜೋಲಿಹೋದಳು. ಬೆಳಕೇ ಕತ್ತಲಿಟ್ಟಂತಾದಳು. ಇಷ್ಟು ವರ್ಷಗಳಲ್ಲಿ ಇಂಥದ್ದೋ ಮತ್ತೆಂಥದ್ದೋ ಉಸಾಬರಿಗಳಲ್ಲಿ ಸಿಕ್ಕಿಕೊಂಡಾಗ 'ಇನ್ನು ಸಾಕು ನಿನ್ನ ಸವಾಸ' ಅಂತ ಎದ್ದು ನಿಂತವಳ ಕಾಲಿಡಿದಿದ್ದ. ತಪ್ಪಾಯ್ತು ಅಂದಿದ್ದ. ಮತ್ತೊಮ್ಮೆ ಹೀಗೆ ಮಾಡುವುದಿಲ್ಲ ಅಂದಿದ್ದ. ಮಾತಿಗಾದರೂ ಅಂದಿದ್ದ. ಅವಳಿಗೆ ಅಷ್ಟೇ ಸಾಕಿತ್ತು. ಅಷ್ಟಾದರು ಸಾಕಿತ್ತು. ಮುಳುಗಲಾಗದೇ ದಡ ತಬ್ಬುವ ಪ್ರವಾಹದ ಮೀನಜಬ್ಬಿನಂತೆ ಅವನ ತೋಳುಗಳಿಗೆ ಆತುಕೊಳ್ಳುತ್ತಿದ್ದಳು. ದೇಹಗಳು ಒಂದಾದಂತೆ ಮನಸ್ಸು ಒಂದಾಗುತ್ತದೆಂಬ ಸುಂದರ ನಕಾಶೆ ಬಿಡಿಸುತ್ತ. ಅವನನ್ನು ಕಣ್ಣಗೊಂಬಿಯಾಗಿ ಉಸಿರ ಸಿರಿಯಾಗಿ ಸಂಭ್ರಮಿಸುತ್ತಿದ್ದಳು. ಈಗ ಊಹೂಂ... ಅವನು ಮೆತ್ತಗಾಗುತ್ತಿಲ್ಲ. ಆಗುವುದಿಲ್ಲ. ಮುಟ್ಟು ನಿಂತು ಮುದಿತನದ ಕೆನೆಗಟ್ಟುತ್ತಿರುವ ದೇಹದಿಂದಲೂ ಅವನಿಗೆ ಪ್ರಯೋಜನ ಕಾಣುತ್ತಿಲ್ಲ. ಬಲು ಪ್ರಾಕ್ಟಿಕಲ್ ಅವನು. ಅವಳನ್ನು ಉದುರಿಸಿಕೊಳ್ಳಬಹುದಾದ